ಸತ್ಯ ಪ್ರತಿಜ್ಞೆಯ ಮೇರೆಗೆ, ದಿನಾಂಕಃ **18-07-2022** **ಪಿಡಬ್ಲ್ಯೂಃ 2**

<u>ಮುಂದುವರಿದ ಪಾಟೀ ಸವಾಲುಃ ಶ್ರೀ ಆರ್ ಎಲ್ ಪಿ **17** ರಿಂದ **19** ನೇ ಪ್ರತಿವಾದಿಯರ ಪರ ವಕೀಲರಿಂದಃ</u>

ಸನ್ 2005 ರಲ್ಲಿ ದಾವಾಆಸ್ತಿಗಳ ಕಿಮ್ಮತ್ತು ಎಷ್ಟಿತ್ತು ಎನ್ನುವುದು ನನಗೆ ನೆನಪಿಲ್ಲ. ಆ ಸಮಯದಲ್ಲಿ ದಾವಾಆಸ್ತಿ ಕಿಮ್ಮತ್ತು ರೂ.2,64,000/- ಇರಬಹುದಾ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ಅ.ದಾ.ನಂ. 74/2006 ರಲ್ಲಿ ಸೇರ್ಪಡೆಯಾಗಲು ನಿಮಗೇನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿಯು ನೆನಪಿಲ್ಲ ಅನ್ನುತ್ತಾರೆ. ಸದರಿ ದಾವೆಯ ಆದೇಶದ ವಿರುದ್ಧ ಮಾನ್ಯ 7 ನೇ ಹೆಚ್ಚುವರಿ ಜಿಲ್ಲಾ ವ ಸತ್ರ ನ್ಯಾಯಾಧೀಶರು ಚಿಕ್ಕೋಡಿ ಇವರ ನ್ಯಾಯಾಲಯದಲ್ಲಿ ಆರ್ ಎ ನಂ.125/2016 ನೇ ಮೇಲ್ಮನವಿಯಲ್ಲಿ ನಿಮಗೆ ಸೇರ್ಪಡೆಯಾಗಲು ಏನಾದರೂ ತೊಂದರೆ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ಪ್ರತಿವಾದಿ

 ನಂ.

17 ರಿಂದ 19 ರವರು ದಾವಾಆಸ್ತಿಯಲ್ಲಿ ಒಂದು ಹೊಂಡ ತೆಗೆದಿದ್ದು ಅದರ ಕಿಮ್ಮತ್ತು ಸುಮಾರು 7 ಲಕ್ಷ ರೂ. ಆಗುತ್ತಾ ಎಂದರೆ ಸಾಕ್ಷಿಯು ಅವರು ಯಾವುದೇ ಹೊಂಡ ತೆಗೆದಿಲ್ಲ ಎನ್ನುತ್ತಾರೆ. ದಾವಾಆಸ್ತಿಯಲ್ಲಿ ಬೋರ್ ವೆಲ್ ಇದೆ. ಸದರಿ ಕೊಳವೆಬಾವಿ ಎಷ್ಟು ಆಳದಲ್ಲಿದೆ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ಸದರಿ ಬೋರ್ ವೆಲ್ ಗೆ ಎಷ್ಟು ಹೆಚ್ ಪಿ ಮೋಟಾರ ಅಳವಡಿಸಿದ್ದಾರೆ ಅನ್ನುವುದು ನನಗೆ ನೆನಪಿಲ್ಲ. ಸದರಿ ಬೋರ್ ವೆಲ್ ನ ಆರ್ ಆರ್ ನಂಬರ ಎಷ್ಟು ಎನ್ನುವುದು ನನಗೆ ನೆನಪಿಲ್ಲ. ದಾವಾಸ್ವತ್ತಿನ ಈಗಿನ ಸ.ನಂ.489/5 ಅ ಇರುತ್ತದೆ. ಮೊದಲು ಈ ಜಮೀನಿನ ಸ.ನಂ.489/1 ಅಂತಾ ಇತ್ತು ಎಂದರೆ ಸರಿಯಲ್ಲ. ನಂತರ ಸದರಿ ಸ.ನಂಬರ ಹಿಸ್ಸಾ 1 ಮತ್ತು 2 ಅಂತಾ ವಿಭಾಗವಾಗಿರುತ್ತದೆ ಎಂದರೆ ನನಗೆ ನೆನಪಿಲ್ಲ. ಹಿಸ್ಸಾ ನಂ. 1 ಯಾರಿಗೆ ಹೋಯಿತು ಹಿಸ್ಸಾ ನಂ.2 ಯಾರ ಹೆಸರಿನಲ್ಲಿ ದಾಖಲಾಯಿತು ಎನ್ನುವುದು ನನಗೆ ನೆನಪಿಲ್ಲ. ಹಿಸ್ಸಾ ನಂ. 1 ಮತ್ತು 2 ಆಗಿರುವ ಉತಾರವನ್ನು ನಾನು ನೋಡಿಲ್ಲ. ಸ.ನಂ.489 ದಕ್ಷಿಣ-ಉತ್ತರ ಮುಖವಾಗಿರುತ್ತದೆ. ಅದೇ ರೀತಿ ಹಿಸ್ಸಾ ನಂ.1 ಮತ್ತು 2 ಯಾವ ಯಾವ ದಿಕ್ಕಿನಲ್ಲಿರುತ್ತವೆ ನನಗೆ ನೆನಪಿಲ್ಲ . ಬೋರ್ ವೆಲ್ ಯಾವ ಯೋಜನೆಯಡಿ ಮಂಜೂರಾಗಿದೆ ನನಗೆ ನೆನಪಿಲ್ಲ . ಅದು ಯಾರ ಹೆಸರಿನಲ್ಲಿ ಮಂಜೂರಾಗಿದೆ ಅನ್ನುವುದು ನನಗೆ ನೆನಪಿಲ್ಲ . ಸದರಿ ಬೋರ್ ವೆಲ್ಗೆ ಕೆಎಬಿ ಯವರು ಆರ್ ಆರ್ ನಂ.49666 ಅಂತಾ ನಂಬರ ನೀಡಿದ್ದಾರೆ ಎಂದರೆ ಕೊಟ್ಟಿರಬಹುದು. ಸಾಕ್ಷಿಗೆ ಒಂದು ದಾಖಲೆ ತೋರಿಸಿ ಅದರಲ್ಲಿ ಆರ್ ಆರ್ ನಂ.49666 ಯಾರ ಹೆಸರಿನಲ್ಲಿದೆ ಎಂದರೆ ಸಾಕ್ಷಿಯು ದಾಖಲೆ ಓದಿ ನೋಡಿ ಪ್ರತಿವಾದಿ ನಂ.19 ಇವರ ಹೆಸರಿನಲ್ಲಿದೆ. ಸಾಕ್ಷಿಯು ಮುಂದುವರಿದು ಸದರಿ ದಾಖಲೆ ಖೊಟ್ಟಿ ಇದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ದಾಖಲೆಯ ದೃಢೀಕೃತ ನಕಲು ತೋರಿಸಿ, ಸದರಿ ಬೋರ್ ವೆಲ್ ಲಾಲಸಾಬ ಇವರಿಗೆ ಗಂಗಾಕಲ್ಯಾಣ ಯೋಜನೆಯಲ್ಲಿ ಮಂಜೂರಾಗಿರುತ್ತದೆ ಎಂದರೆ ಸಾಕ್ಷಿಯು ದಾಖಲೆ ನೋಡಿ ಅದರಲ್ಲಿ ಬರೆದಿದ್ದು ಇದೆ ಅಂತಾ ನುಡಿಯುತ್ತಾರೆ. ಸದರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ದಾಖಲೆ ದೃಢೀಕೃತ ನಕಲು ತೋರಿಸಿ, ಮೇಲ್ಕಂಡ

ಬೊರ್ ವೆಲ್ ಗೆ ಬಿಲ್ಲನ್ನು ಲಾಲಸಾಬ ಹೆಸರಿನಲ್ಲಿ ಹೆಸ್ಕಾಂ ನವರು ಮಾಡಿದ್ದು ಇದೆ ಎಂದರೆ ಸಾಕ್ಷಿಯು ದಾಖಲೆ ನೋಡಿ ಹೌದು ಅಂತಾ ಉತ್ತರಿಸುತ್ತಾರೆ. ಆದ್ದರಿಂದ ಸದರಿ ದಾಖಲೆಯನ್ನು ನಿಡಿ-2 ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ದಾಖಲೆ ದೃಢೀಕೃತ ನಕಲು ತೋರಿಸಿ, ಸದರಿ ದಾಖಲೆಯು ಲಾಲಸಾಬ ಇವರಿಗೆ ಕೊಳವೆ ಬಾವಿ ತೆಗೆದ ಕುರಿತು ನೀಡಿದ ದಾಖಲೆ ಇರುತ್ತದೆ ಅಂತಾ ಕೇಳಿದ ಪ್ರಶ್ನೆಗೆ ಸಾಕ್ಷಿಯು ದಾಖಲೆ ನೋಡಿ ಹೌದು ಅಂತಾ ಉತ್ತರಿಸುತ್ತಾರೆ. ಆದ್ದರಿಂದ ಸದರಿ ದಾಖಲೆಯನ್ನು ನಿಡಿ-3 ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ದಾಖಲೆ ದೃಢೀಕೃತ ನಕಲು ತೋರಿಸಿ, ಸ.ನಂ. 489/5 ಎ ಜಮೀನಿಗೆ ಸಂಬಂದಿಸಿದಂತೆ ಪ್ರತಿವಾದಿ ನಂ. 17 ಇವರು ಕೃಷ್ಣಾ ಸಕ್ಕರೆ ಕಾರ್ಖಾನೆ ಅಥಣಿ ಇವರಿಗೆ ಕಬ್ಬು ನೀಡಿದ ಬಗ್ಗೆ ಕಬ್ಬು ತೂಕಿನ ಸ್ಲಿಪ್ ಇರುತತದೆ ಎಂದರೆ ಸಾಕ್ಷಿಯು ದಾಖಲೆ ನೋಡಿ ಹೌದು ಅಂತಾ ಉತ್ತರಿಸುತ್ತಾರೆ. ಆದ್ದರಿಂದ ಸದರಿ ದಾಖಲೆಯನ್ನು ನಿಡಿ-4 ಎಂದು ಗುರುತಿಸಲಾಯಿತು.

ಸಾಮಾನ್ಯವಾಗಿ ಬ್ಯಾಂಕಿನವರು ಜಮೀನು ಯಾರ ಹೆಸರಿನಲ್ಲಿದೆ, ಯಾರ ಸ್ವಾ ದೀನದಲ್ಲಿದೆ ಅನ್ನುವುದನ್ನು ಪರಿಶೀಲನೆ ಮಾಡಿ ಸಾಲವನ್ನು ನೀಡುತ್ತಾರೆ ಎಂದರೆ ಸರಿ. ಸಾಕ್ಷಿಗೆ ದಾಖಲೆ ದೃಢೀಕೃತ ನಕಲು ತೋರಿಸಿ, ಅದು ಎಮ್ ಆರ್ ನಂ.468/2005-16 ಆಗಿದ್ದು ಸದರಿ ದಾಖಲೆಯಲ್ಲಿ ಪ್ರತಿವಾದಿ ನಂ.17 ರಿಂದ 19 ರವರು ನಾಗನೂರ ಪಿ ಕೆ ಬ್ಯಾಂಕಿನಿಂದ ಸಾಲ ಪಡೆದ ಕುರಿತು ಆದ ಎಮ್ ಆರ್ ಆಗಿರುತ್ತದೆ ಅಂತಾ ಕೇಳಿದ



ಪ್ರಶ್ನೆಗೆ ಸಾಕ್ಷಿಯು ದಾಖಲೆ ನೋಡಿ ಹೌದು ಅಂತಾ ಉತ್ತರಿಸುತ್ತಾರೆ. ಆದ್ದರಿಂದ ಸದರಿ ದಾಖಲೆಯನ್ನು ನಿಡಿ-5 ಎಂದು ಗುರುತಿಸಲಾಯಿತು. ಖರೀದಿಪತ್ರದ ಪ್ರಕಾರ ಪ್ರತಿವಾದಿ ನಂ. 17 ರಿಂದ 19 ರವರ ಹೆಸರಿನಲ್ಲಿ ಪಹಣಿ ದಾಖಲಾಗಿದೆ ಎಂದರೆ ಸಾಕ್ಷಿ ಖೊಟ್ಟಿಯಾಗಿದೆ ಎನ್ನುತ್ತಾರೆ. ದಿ.23.09.2005 ರ ದಾಖಲೆಯಲ್ಲಿ ಅಪ್ಪಾಸಾಬ ಮತ್ತು ಲಕ್ಷ್ಮೀಬಾಯಿ ಇವರ ಸಹಿಯನ್ನು ಮಾಡಿದ್ದಾರೆ ಎಂದರೆ ಸಾಕ್ಷಿಯು ಕುಡಿದ ಅಮಲಿನಲ್ಲಿ ಅಪ್ಪಾಸಾಬ ಇವನ ಸಹಿಯನ್ನು ಪಡೆದಿದ್ದಾರೆ ಎನ್ನುತ್ತಾರೆ. ಸಾಕ್ಷಿಗೆ ದಿ.23.09.2005 ರ ಖರೀದಿಪತ್ರದ ದೃಢೀಕೃತ ನಕಲನ್ನು ತೋರಿಸಿ ಸದರಿ ದಾಖಲೆಗೆ ಲಕ್ಷ್ಮೀಬಾಯಿ ಇವರು ಸಹಿಯನ್ನು ಮಾಡಿದ್ದಾರೆ ಎಂದರೆ ಸಾಕ್ಷಿಯು ದಾಖಲೆ ಪರಿಶೀಲಿಸಿ ಹೌದು ಸದರಿ ದಾಖಲೆಗೆ ಸಹಿ ಮಾಡಿದ್ದಾರೆ ಎಂದು ಉತ್ತರಿಸಿದ್ದು, ಸದರಿ ದಾಖಲೆಯನ್ನು ನಿಡಿ-6 ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ಸಾಕ್ಷಿ ಅಂತಾ ಶ್ರೀಶೈಲ ಬಸಗೌಡ ಭಾಂವಿ, ಬುರಾನ್ ಸಾಬ್ ನದಾಫ್, ಬಾಬು ರಾಮು ಹುಲ್ಯಾಳ ಇವರು ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಖೊಟ್ಟಿಯಾಗಿ ಮಾಡಿರುತ್ತಾರೆ ಎನ್ನುತ್ತಾರೆ. ಸದರಿ 3 ಜನ ರಡ್ಡೇರಹಟ್ಟಿ ಗ್ರಾಮದವರು ಎಂದರೆ ನನಗೆ ನೆನಪಿಲ್ಲ. ಸದರಿಯವರನ್ನು ನಾನು ನೊಡಿಯೇ ಇಲ್ಲ ನನಗೆ ನೆನಪಿಲ್ಲ.

ಪ್ರತಿವಾದಿ ನಂ. 17 ರಿಂದ 19 ರವರನ್ನು ದಾವಾಸ್ವತ್ತು ಯಾರು ಖರೀದಿಗೆ ಕೊಟ್ಟರು ಎಂದರೆ ಸಾಕ್ಷಿಯು ಅವರಿಗೆ ಖರೀದಿ ಕೊಟ್ಟಿಲಲ ಎನ್ನುತ್ತಾರೆ ಮುಂದುವರೆದು ನೆನಪಿಲ್ಲ ಎನ್ನುತ್ತಾರೆ. ಪ್ರತಿವಾದಿ ನಂ.17 ರಿಂದ 19 ರವರ ಹೆಸರು ದಾವಾಆಸ್ತಿಯ ಪಹಣಿಯಲ್ಲಿ ದಾಖಲಾಗುವ ಮುಂಚೆ ಸದರಿ ಸ್ವತ್ತು ನಮ್ಮ ಅಜ್ಜನ ಹೆಸರಿನಲ್ಲಿ ದಾಖಲಿತ್ತು. ನಮ್ಮ ಅಜ್ಜನ ಹೆಸರು ಶ್ಯಾಮು ಬುದ್ದಿವಂತ ದುಬರಿ. ಸದರಿಯವನ ಹೆಸರು ಯಾವ ವರ್ಷದಿಂದ ಯಾವ ವರ್ಷದ ವರೆಗೆ ದಾಖಲಿತ್ತು ಎನ್ನುವುದು ನನಗೆ ನೆನಪಿಲ್ಲ. ಅಜ್ಜನ ಹೆಸರಿನಲ್ಲಿರುವ ಜಮೀನಿನ ಉತಾರ

ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಪ್ರತಿವಾದಿ ನಂ.17 ರಿಂದ 19 ನಲ್ಲಿರುವಂತಹ ದಾವಾಆಸ್ತಿಯ ಪಹಣಿಪತ್ರಿಕೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಅವರ ಹೆಸರು ದಾವಾಆಸ್ತಿಯಲ್ಲಿ ಹೇಗೆ ದಾಖಲಾಯಿತು ಎನ್ನುವುದು ನಾನು ಬರೆಸಿಲ್ಲ. ಸದರಿಯವರ ಹೆಸರು ದಾವಾಸ್ವತ್ತಿನಲ್ಲಿ ಹೇಗೆ ದಾಖಲಾಯಿತು ಎನ್ನುವ ಕುರಿತು ನನ್ನ ಸಾಕ್ಷ್ಯಪ್ರಮಾಣಪತ್ರದಲ್ಲಿಯಾ ಸಹ ನಾನು ಬರೆಸಿಲ್ಲ. ನನ್ನ ಸಾಕ್ಷ್ಯಪ್ರಮಾಣಪತ್ರದಲ್ಲಿ ದಾವಾಆಸ್ತಿಯ ಚಕಬಂದಿಯನ್ನು ನಾನು ಬರೆಸಿದ್ದೇನೆ.

ಸನ್ 2005 ರಲ್ಲಿ ದಾವಾಆಸ್ತಿಯ ಪೂರ್ವಕ್ಕೆ ಸತ್ಯಪ್ಪ ಬಸಪ್ಪ ಕೊನ್ನೂರ ಇವರ ಜಮೀನು ಇತ್ತಾ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ಅದೇರೀತಿ ಪಶ್ಚಿಮಕ್ಕೆ ತಿಪ್ಪಣ್ಣ ಸಾಗು ಹುಲ್ಯಾಳ ಇವರ ಜಮೀನು ಇತ್ತಾ ಎಂದರೆ ಸಾಕ್ಷಿ ಇದೆ ಎನ್ನುತ್ತಾರೆ. ದಕ್ಷಿಣಕ್ಕೆ ಸರ್ಕಾರಿ ರಸ್ತೆ ಎಂದರೆ ಸರಿ. ಉತ್ತರಕ್ಕೆ ಬಸಪ್ಪ ನಾಗಪ್ಪಾ ಖೋತ ಇವರ ಜಮೀನು ಇದೆ ಎಂದರೆ ಸಾಕ್ಷಿ ಖೋತ ಅವರ ಜಮೀನು ಇದೆ ಎನ್ನುತ್ತಾರೆ. ಈ ರೀತಿ ಚಕಬಂದಿಯನ್ನು ನಾನು ನನ್ನ ಸಾಕ್ಷ್ಯಪ್ರಮಾಣಪತ್ರದಲ್ಲಿ ಬರೆಸಿಲ್ಲ. ಈ ರೀತಿ ಚಕಬಂದಿಯನ್ನು ವಾದಿಯು ವಾದಿಯು ತನ್ನ ವಾದಪತ್ರದಲ್ಲಿ ಬರೆಸಿದ್ದಾರೆ. ದಾವಾಆಸ್ತಿಯಲ್ಲಿ ಕಬ್ಬಿನ ಬೆಳೆ ಇದೆ ಎಂದರೆ ಸರಿ. ಕಬ್ಬನ್ನು ಯಾರು ಬೆಳೆದಿರುತ್ತಾರೆ ಅವರೇ ಪ್ರತಿವರ್ಷ ದಾವಾಆಸ್ತಿಯ ಕಬ್ಬನ್ನು ಹಳುಹಿಸುತ್ತಾರೆ ಎಂದರೆ ಸರಿ. ಕಬ್ಬನ್ನು ಕಳಿಸಿದಾಗ ಕಾರ್ಖಾನೆಯವರು ರಸೀದಿ ಒಳಗೆ ಕಬ್ಬು ಕಳುಹಿಸಿದವರ ಹೆಸರು, ಜಮೀನು ಸರ್ವೆನಂಬರ ನಮೂದಿಸಿರುತ್ತಾರೆ ಎಂದರೆ ಸರಿ. ಯಾರ ಹೆಸರಿನಲ್ಲಿ ಜಮೀನು ಇರುತ್ತದೆ ಯಾರು ಸ್ವಾದೀನದಲ್ಲಿರುತ್ತಾರೆ ಅವರೇ ಜಮೀನಿನ ಕಂದಾಯವನ್ನು ಸರ್ಕಾರಕ್ಕೆ ಪಾವತಿಸುತ್ತಾರೆ ಎಂದರೆ ಸರಿ. ಪ್ರತಿವಾದಿ ನಂ.17 ರಿಂದ 19 ರವರು ನ್ಯಾಯಸಮ್ಮತವಾಗಿ ಸನ್



2005 ರಲ್ಲಿ ಯೋಗ್ಯ ಬೆಲೆಗೆ ದಾವಾಸ್ವತ್ತನ್ನು ಖರೀದಿಸಿ ಅದರಂತೆ ಪಹಣಿಯಲ್ಲಿ ತಮ್ಮ ಹೆಸರನ್ನು ದಾಖಲಿಸಿಕೊಂಡು ಸ್ವಾದೀನದಲ್ಲಿದ್ದರೂ ಸಹ ಅವರಿಗೆ ತೊಂದರೆ ಕೊಡಲು ವಾದಿಯು ಈ ಸುಳ್ಳು ದಾವೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು ಅದರಂತೆ ನಾನು ವಾದಿ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವರ್ಷ ಪ್ರತಿವಾದಿ ನಂ.17 ರಿಂದ 19 ರವರು ಕಾರ್ಖಾನೆಗೆ ಕಬ್ಬು ಕಳಿಸುವಾಗ ನೀವು ತಕರಾರು ಮಾಡಿದ್ದೀರಿ ಎಂದರೆ ಖೋಟ್ಟಿ ಇದೆ ನಾವು ತಕರಾರು ಮಾಡಿದ್ದೇವೆ ಎನ್ನುತ್ತಾರೆ. ಸದರಿ 3 ಜನರು ದಾವಾಸ್ವತ್ತನ್ನುಪಾಲು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎನ್ನುತ್ತಾರೆ. ಅದರಂತೆ ಉತಾರಗಳು ಇರುತ್ತವೆ ಎಂದರೆ ಸಾಕ್ಷಿಯು ಅದು ಖೊಟ್ಟಿ ಇರುತ್ತವೆ ಎನ್ನುತ್ತಾರೆ. ಸದರಿ ಪಹಣಿಗಳು ಖೊಟ್ಟಿ ಇದೆ ಎನ್ನುವ ಕುರಿತು ನಾನು ಸಂಬಂಧಿಸಿದ ಕಂದಾಯ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದೇನೆ. ಜಮೀನಿನೊಳಗೆ 3 ಪಟ್ಟಿ ಆಗಿವೆ ಎಂದರೆ ಸಾಕ್ಷಿ ಇಲ್ಲ ಅದು ಒಂದೇ ಪಟ್ಟಿ ಇದೆ ಎನ್ನುತ್ತಾರೆ. ಸದರಿ ಜಮೀನುಗಳಲ್ಲಿ ಆರ್ ಸಿ ಸಿ ಮನೆ ಇದೆ ಎಂದರೆ ಇಲ್ಲ. ಮತ್ತು ಟ್ರಾಕ್ಟರ್ ನಿಲ್ಲಿಸಲು ಶೆಡ್ ಇದೆ ಎಂದರೆ ಇಲ್ಲ. ಅ.ದಾ.ನಂ.76/2006 ದಾವೆ ವಜಾ ಆದ ನಂತರ ಆ ದಾವೆಯ ವಾದಿ ಮತ್ತು ನಾನು ಸೇರಿ ಈ ದಾವೆ ದಾಖಲಿಸಿರುತ್ತೇವೆಂದರೆ ಸರಿ. ಪ್ರತಿವಾದಿ ನಂ.17 ರಿಂದ 19 ರವರು ಕಾನೂನುಸಮ್ಮತವಾಗಿ ದಾವಾಜಮೀನು ಖರೀದಿಸಿರುವ ವಿಚಾರ ಗೊತ್ತಿದ್ದರೂ ಅವರಿಗೆ ತೊಂದರೆ ಮಾಡಲು ಸುಳ್ಳು ದಾವೆ ದಾಖಲಿಸಿದ್ದೀರಿ ಎಂದರೆ

ಸರಿಯಲ್ಲ. ಖರೀದಿ ಆದ ದಿನದಿಂದ ಇಲ್ಲಿಯವರಗೂ ದಾವಾಸ್ವತ್ತಿನ ಕಂದಾಯವನ್ನು ಪ್ರತಿವಾದಿ ನಂ. 17 ರಿಂದ 19 ರವರೇ ಪಾವತಿಸುತ್ತಾ ಬಂದಿದ್ದಾರೆ ಎಂದರೆ ಸರಿಯಲ್ಲ. ಸದರಿ ದಾವಾ ಆಸ್ತಿಯ ಕಂದಾಯವನ್ನು ಯಾರು ಪಾವತಿಸಿದ್ದಾರೆ ಎನ್ನುವುದು ನನಗೆ ನೆನಪಿಲ್ಲ. ದಾವಾಸ್ವತ್ತಿಗೆ ಸಂಬಂದಿಸಿದ ಕಂದಾಯ ಪಾವತಿಸಿದ ರಸೀದಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಅದನ್ನು ಹಾಜರುಪಮಾಡಲು ನನಗೆ ಯಾವುದೇ ತೊಂದರೆ ಇರಲಿಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ. ಕೇ. ಸರಿ. ಇದೆ**

**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ**
**ಜೆ. ಎಂ. ಎಫ್. ಸಿ. ನ್ಯಾಯಾಲಯ ಅಥಣಿ.**